# ಬೆಸಗರಹಳ್ಳಿ ರಾಮಣ್ಣ ಅವರ 'ಬೇಲ' ಕಥೆಯಲ್ಲಿನ ಬಹುತ್ವದ ಬೆರಗು

**ಚಂದ್ರಶೇಖರ್ ಎನ್.**

ಸಹಾಯಕ ಪ್ರಾಧ್ಯಾಪಕರು, ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ), ಕೆ.ನಾರಾಯಣಪುರ, ಬೆಂಗಳೂರು.

**Received: 16-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724477**

**ABSTRACT:**

ಕನ್ನಡ ಕಥಾ ಜಗತ್ತಿನಲ್ಲಿ ಬೆಸಗರಹಳ್ಳಿ ರಾಮಣ್ಣನವರು ಮೂಡಿಸಿದ ಛಾಪು ಓದುಗ ಲೋಕಕ್ಕೆ ಇಂದಿಗೂ ಆಪ್ತವಾಗಿಯೇ ಇದೆ. ತಮ್ಮ ವೃತ್ತಿ ಹಾಗೂ ಪ್ರವೃತ್ತಿಗಳಲ್ಲಿ ಸಾಮರಸ್ಯವನ್ನು ಕಾಯ್ದುಕೊಂಡು ಅವರು ಮಾಡಿದ ಸಾಹಿತ್ಯ ಕೃಷಿ ವಿಶೇಷವಾದದ್ದು. ತಮ್ಮ ಬರಹಗಳಲ್ಲಿ ಮೂಡಿ ಬಂದಿರುವ ನಿರಾಡಂಬರ ಹಾಗೂ ಸಹಜತೆ ತಮ್ಮ ಬರಹದ ಶಕ್ತಿಯನ್ನು ಹೆಚ್ಚಿಸಿದೆ. ಒಬ್ಬ ಓದುಗನಿಗೆ ಕತೆಗಾರ, ಕಾದಂಬರಿಕಾರ ಕೊಡಮಾಡುವ ಭಾವನಾತ್ಮಕ ಸಾಂತ್ವನ ಇವರ ರಚನೆಗಳಲ್ಲಿ ಅಗಾಧವಾದ ಇಳುವರಿಯನ್ನು ನೀಡಿದೆಯೆಂದರೆ ತಪ್ಪಾಗಲಾರದು. ಇವರು ಸಮಾಜವನ್ನು ಕಂಡ, ಕಟ್ಟಿಕೊಟ್ಟ ನೋಟಕ್ರಮವೇ ಭಿನ್ನವಾದದ್ದು. ಸಾಮಾಜಿಕವಾದ ಹಾವು ಏಣಿಯಾಟದಲ್ಲಿ ಜಮೀನ್ದಾರಿ ಪದ್ಧತಿ ಹಾಗೂ ವೇಶ್ಯಾವೃತ್ತಿಯ ಕರಾಳ ಮುಖವನ್ನು 'ಬೇಲ' ಕತೆಯಲ್ಲಿ ಅನಾವರಣಗೊಳಿಸಿದ್ದಾರೆ. ವೃತ್ತಿಯಲ್ಲಿ ನರ್ತಕಿಯಾದ ಸ್ಫುರದ್ರೂಪಿ ಹೆಣ್ಣು ಬೇಲ. ತನ್ನ ಮೈ-ಮಾಟದಿಂದಲೇ ಎಂಥವರನ್ನೂ ಸೆಳೆವ ಮಾಂತ್ರಿಕಶಕ್ತಿಯಿದ್ದವಳು. ಆದರವಳು ಈ ಕಥೆಗಾರನನ್ನು ಮೆಚ್ಚಿ ಹಚ್ಚಿಕೊಳ್ಳುವ ಬಗೆ ಅವಳ ಅಂತರಂಗವನ್ನು ಬಹಿರಂಗಗೊಳಿಸುತ್ತದೆ. ಸದಾ ಸಮಾನತೆಗಾಗಿ ತುಡಿವ ಕತೆಗಾರನಿಗೆ ಅದೇ ಗುಣದ ಬೇಲ ಶರಣಾಗಿ ತನ್ನ ಕಾಯಕದ ಮೂಲಕವೇ ತನ್ನದೇ ಗಂಧರ್ವ ಜಾತಿಯಲ್ಲಿ ತನ್ನಂತೆ ಸ್ವಾವಲಂಬಿಯಾಗಿ ಬದುಕಲಾಗದೆ ಹವಣಿಸುತ್ತಿರುವ, ಅಸಹಾಯಕತೆಯ ಬಲೆಯಲ್ಲಿ ಸಿಲುಕಿರುವ ಅಸಂಖ್ಯ ಅಬಲೆಯರ ಪರವಾದ ದನಿಯಾಗಿ ನಿಲ್ಲುವ ಪ್ರಯತ್ನ ಹಾಗೂ ವ್ಯವಸ್ಥೆಯ ಬಗೆಗಿನ ಪ್ರತಿರೋಧ ಅವಳಲ್ಲಿನ ಮಾನವೀಯ ಕಳಕಳಿಗೆ ಸಾಕ್ಷಿಯಾಗಿದೆ. ವೈದ್ಯ ವೃತ್ತಿಯಲ್ಲಿ ಗ್ರಾಮೀಣ ಶ್ರಮಿಕವರ್ಗಕ್ಕೆ ಸೇವೆ ಸಲ್ಲಿಸಿ ಸಾರ್ಥಕತೆಯನ್ನು ಮೆರೆದು, ಕೇವಲ ಕಥೆಯ ದೃಷ್ಟಿಯಿಂದಲ್ಲದೆ ನಿಜ ಬದುಕಿನಲ್ಲೂ ಸಾಮಾಜಿಕ ಬದಲಾವಣೆಗಾಗಿ ತಮ್ಮ ಗುರಿಗಳನ್ನು ನಿಶ್ಚಲವಾಗಿರಿಸಿಕೊಂಡು ಬದುಕಿದ ನಿಜ ಜೀವಿ ಬೆಸಗರಹಳ್ಳಿ ರಾಮಣ್ಣನವರು.

**KEYWORDS:**

ಪಾರುಪತ್ಯ, ಜನಾಂಗೀಯ ದ್ವೇಷ, ಕೋಮುಗಲಭೆ, ಧರ್ಮಸಂಘರ್ಷ, ಸ್ವಾತಂತ್ರ್ಯಹರಣ, ಅಸಹಿಷ್ಣುತೆ, ಪೂರ್ಣದೃಷ್ಟಿ.

ಭಾರತದ ಭೂಪಟದಲ್ಲಿ ಬಿಹಾರ ಭೌಗೋಳಿಕ ಹಾಗೂ ಚರಿತ್ರೆಯ ದೃಷ್ಟಿಯಲ್ಲಿ ಪ್ರಮುಖವಾಗಿದೆ. ಧರ್ಮದ ವಿಚಾರವಾಗಿ ನೋಡಿದಾಗ ಜಗತ್ತಿಗೆ ಪ್ರೀತಿ, ಕರುಣೆ, ಶಾಂತಿ, ಸಾಮರಸ್ಯದ ಮಾರ್ಗ ತೋರಿದ ಧರ್ಮಗಳಾದ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮಗಳ ಪ್ರವರ್ತಕರಾದ ಬುದ್ಧ, ಮಹಾವೀರ, ಗುರುಗೋವಿಂದಸಿಂಗ್‌ರನ್ನು ಪೊರೆದ ನೆಲವಾಗಿದೆ. ಮಿಗಿಲಾಗಿ ಸಾಮಾಜಿಕ, ರಾಜಕೀಯ ಹೋರಾಟಗಾರರಾದ ರಾಜೇಂದ್ರ ಪ್ರಸಾದ್, ರಾಸ್ ಬಿಹಾರ್‌ಲಾಲ್ ಮಂಡಲ್ ಹಾಗೂ ಜಯಪ್ರಕಾಶ್ ನಾರಾಯಣರಂತಹ ಮಹಾಪುರುಷರನ್ನು ದೇಶಕ್ಕೆ ಕೊಡುಗೆಯಿತ್ತ ನಂಟು ಈ ಮಣ್ಣಿಗಿದೆ.

ಇಷ್ಟೇ ಅಲ್ಲದೆ ರಾಜಕೀಯ ಅಸ್ಥಿರತೆ, ಸಂಪತ್ತಿನ ಕೊರತೆ, ಕೌಟುಂಬಿಕ ಪಾರುಪತ್ಯ, ಜಮೀನ್ದಾರಿಕೆ, ದಬ್ಬಾಳಿಕೆ, ಜನಾಂಗೀಯ ದ್ವೇಷ, ಜಾತಿಪದ್ಧತಿ, ಕೋಮುಗಲಭೆ, ಧರ್ಮಸಂಘರ್ಷ, ಸ್ತ್ರೀಸ್ವಾತಂತ್ರ್ಯಹರಣ, ಅತ್ಯಾಚಾರ,ಕೊಲೆ-ಸುಲಿಗೆಯಂತಹ ಸಾಮಾಜಿಕ ಸಮಸ್ಯೆಗಳ ತವರೂ ಹೌದು. ದೇಶದ ಒಟ್ಟಾರೆ ಸಾಕ್ಷರತೆಯಲ್ಲಿ ರಾಷ್ಟ್ರೀಯ ಸರಾಸರಿ ಅನುಪಾತಕ್ಕಿಂತ ಕಡಿಮೆ ಅಂದರೆ ಶೇಕಡಾ 70.9% ರಷ್ಟಿರುವುದೂ ಒಂದು ದುರಂತವೇ ಸರಿ. ನಾವೆಲ್ಲಾ ಕಂಡು ಕೇಳಿದಂತೆ ನಮ್ಮ ದೇಶ ಭೀಕರ ನೈಸರ್ಗಿಕ ವಿಕೋಪಗಳನ್ನು ಹಲವು ರೋಗರುಜಿನಗಳನ್ನು ಕಂಡಿದೆ. ಅವುಗಳಲ್ಲಿ ಕಾಲರಾ, ಪ್ಲೇಗ್, ದಡಾರಾ, ಪೋಲಿಯೋಗಳೂ ತಮ್ಮ ಪಾರಮ್ಯವನ್ನು ಮೆರೆದಿವೆ. ಇವೆಲ್ಲವುಗಳ ನಡುವೆ 1974ರಲ್ಲಿ ತಲೆದೋರಿದ ಮಹಾಪಿಡುಗೆಂದರೆ ಅದು ಸಿಡುಬುರೋಗ.

ನನ್ನಜ್ಜಿ ಹೇಳಿದ ಕಥೆ ಇಂದಿಗೂ ನೆನೆಪಿದೆ. ಸುಮಾರು 80 ವರ್ಷಗಳ ಹಿಂದೆ ಇಂಗ್ಲೀಸ್ನೋರು ಅಂದ್ರೆ ಬ್ರಿಟೀಷರು ನೀಡುತ್ತಿದ್ದ ಕೆಂಪುಜ್ವಾಳ ಬಡವರ ಪ್ರಧಾನ ಆಹಾರವಾಗಿತ್ತಂತೆ. ಶ್ರೀಮಂತರಿಗೆ ಮಾತ್ರ ಅಕ್ಕಿ, ರಾಗಿ ತಿನ್ನುವ ಯೋಗ ಇತ್ತಂತೆ, ಉಳಿದೋರಿಗೆ ಜೋಳದ ಅಂಬಲಿಯೇ ಹೊಟ್ಟೆಗಾಧಾರ. ಇಂಥಾ ದಿನಮಾನಗಳಲ್ಲಿ ಹೊಟ್ಟೆ ಹೊರೆಯೋ ಸಂಘರ್ಷ ಒಂದೆಡೆಯಾದ್ರೆ, ಹೊಟ್ಟೆಗಂಟಿದ ತೊಗಲಿನ ಬಾದೆ ಇನ್ನೊಂದಂತೆ. ಅದೇ ಈ ಸಿಡುಬುರೋಗ. ಇನ್ನು ಪಿಳ್ಳೆಕ್ಕಿಕಾಯಿಲೆ ಅಂದ್ರೆ ಪ್ಲೇಗ್, Hygiene ಅಂಬೋದು 21 ನೇ ಶತಮಾನದಲ್ಲೂ ಮರೀಚಿಕೆಯಾಗಿರುವಾಗ ಆಗಿನ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ, ಸತ್ತ ಇಲಿಗಳ ಕಾರಣದಿಂದ ತಲೆದೋರುತ್ತಿದ್ದ ಈ ಮಹಾಮಾರಿ ರೋಗ ಊರಿಗೆ ಊರನ್ನೇ ಖಾಲಿ ಮಾಡಿಬಿಡುತ್ತಿತ್ತಂತೆ, ಅದರ ಕುರುಹಾಗಿ ಕಾಡ್ಗಿಚ್ಚಿನಲ್ಲಿ ಉಳಿದ ಒಂಟಿ ಮರಗಳಂತಿದ್ದ ನಮ್ಮೂರ ಮುದಿ ಮಹಿಳೆಯರು ಹೇಳುವುದೇ ಬೇರೆ. ‘ಅಯ್ಯೋ ಅವನಿಗೆ ಬರಬರ್ದು ಬಂದು ಚಾಪೇಲಿ ಸುತ್ಕಂಡೋಗಾ’ ಎಂಬ ಸಾಲಿನ ಮಾರ್ಮಿಕ ಅರ್ಥ ಇದೇ ಎನ್ನುವುದು ದಿಟವೆನಿಸುತ್ತದೆ. ಮಲ್ಗಿದ್ದವ್ರು ಮಲ್ಗದಂಗೇ ಪ್ರಾಣ ಬಿಟ್ಟಿರೋರು ಎನ್ನುವಾಗ ಅವರ ಕುಳಿಬಿದ್ದ ಕಣ್ಣ ರೆಪ್ಪೆಗಳು ಒದ್ದೆಯಾಗುತ್ತಿದ್ದವು. ರೋಗ ನಿವಾರಣೆಗಾಗಿ ದೇಗುಲ ಕಟ್ಟಿ ಪೂಜೆಮಾಡಿ ಪರಿಹಾರಕ್ಕಾಗಿ ಕೈಮುಗಿಯುತ್ತಿದ್ದರ ದ್ಯೋತಕವೇ ಇಂದಿಗೂ ನಮ್ಮೂರ ಸರ್ಕಲ್‌ನಲ್ಲಿರುವ ಪಳ್ಳೆಕ್ಕಮ್ಮನ ಗುಡಿ.

ನಾವೆಲ್ಲಾ ಕಂಡಂತೆ ಅಮ್ಮನಕಾಟ Chicken fox ವಯೋಮಾನದ ಅಂತರವಿಲ್ಲದೆ ಬರುತ್ತಿದ್ದ ಸಮಸ್ಯೆಯಾಗಿದ್ದು, ಸಿಡುಬು ರೋಗದ ಸಮೀಪವರ್ತಿಯೇ ಆದರೂ ಇಂದಿಗೂ

ಇದನ್ನು ದೇವರಕಾಟವೆಂದೇ ಪರಿಗಣಿಸಿ ಆಸ್ಪತ್ರೆ ಕಾಯಿಲೆಗಳ ಪಟ್ಟಿಯಿಂದ ಹೊರಗಿಡಲಾಗಿದೆ. ಆದರೆ ಸೀತಾಳೆ ಸಿಡುಬುರೋಗ ರಕ್ತ ಮತ್ತು ಚರ್ಮದ ಸೋಂಕಿನಿಂದ ಬರುವ ಮಾರಣಾಂತಿಕ ರೋಗವಾಗಿದ್ದು ಸೂಕ್ತ ವೈದ್ಯಕೀಯ ಚಿಕಿತ್ಸೆ ಆಗಲೇಬೇಕು. ಇದರ ವಿರುದ್ಧ ಸಮರ ಸಾರಿದ ವಿಶ್ವ ಆರೋಗ್ಯ ಸಂಸ್ಥೆ (WHO)ಯ ಅಣತಿಯಂತೆ ದೂರದ ಬಿಹಾರಕ್ಕೆ ರೋಗ ನಿರ್ಮೂಲನಾ ಶಿಬಿರಕ್ಕೆ ತೆರಳಿದ ಕನ್ನಡಿಗ ವೈದ್ಯ ಹಾಗೂ ಕಥೆಗಾರನಾದ ಬೆಸಗರಹಳ್ಳಿ ರಾಮಣ್ಣನವರ ಅನುಭವ ಕಥನವೇ ಈ ಬೇಲ. ಬಾಗಲ್‌ಪುರ ಜಿಲ್ಲೆಯ ಬಿಸಾಲ್ ಎಂಬ ಹಳ್ಳಿ ಸಿಡುಬುರೋಗದೊಂದಿಗೆ ಕಥೆಗಾರನ ಮನೋರೋಗಕ್ಕೂ ನಾಂದಿಯಾಗಿ ಕುಡಿತ, ಜೂಜು, ವ್ಯಭಿಚಾರ, ವಿಕೃತ ಮನರಂಜನೆಗೆ ಖ್ಯಾತಿವೆತ್ತ ಊರಾಗಿದ್ದು ವೈದ್ಯಸೇವೆಗಿಂತ ಹೆಚ್ಚು ಸುದ್ದಿಯಾದದ್ದು ಇಲ್ಲಿನ ನಿವಾಸಿ 25 ರ ಪ್ರಾಯದ 'ಬೇಲ' ಎಂಬ ನರ್ತಕಿಯ ಕಾರಣಕ್ಕೆ. ಹೌದು, ಈ ಗ್ರಾಮದ ಜನ ಗಂಧರ್ವಜಾತಿಗೆ ಸೇರಿದವರೆಂಬ ಮಾತಿದೆಯಂತೆ. ಹಾಗಾಗಿ ಇಲ್ಲಿನ ಗದ್ದೆಗಳು ಫಲವತ್ತಾಗಿರುವಂತೆ ಈ ಊರಿನ ಹೆಣ್ಣುಗಳ ಮೈಮಾಟವೂ ಅಷ್ಟೇ ಫಲವತ್ತಾಗಿದೆಯೆಂದರೆ ತಪ್ಪಾಗಲಾರದು. ಅದರಲ್ಲೂ ಬೇಲಳ ಅಂಗಾಂಗ ವರ್ಣನೆಯಂತೂ 'ಋತುಮಾನದಲ್ಲಿ ತೂಗಿ ತೊನೆಯುವ ಮಾವಿನ ಫಸಲಿನಂತೆ ಅವಳ ದೇಹಸಿರಿ' ಎಂದು ಕತೆಗಾರ ಬಣ್ಣಿಸುವ ಪರಿಯಂತೂ ಓದುಗನ ಕಲ್ಪನೆಯ ಕಣ್ಣಿಗೆ ರಸದೌತಣವನ್ನೀಯುತ್ತದೆ. ಕಾರಣ ಈ ಕತೆಯಲ್ಲಿನ ಸನ್ನಿವೇಶ ಹಾಗೂ ಪಾತ್ರಗಳ ಜೀವಂತಿಕೆ ಎಂಥಹುದೆಂದರೆ ಇದು ಸಿನಿಕವೆನಿಸಿದರೂ ಸರಿಯೇ ರಸಿಕರೆದೆಗೆ ಶೃಂಗಾರದ ಸೋಂಕನ್ನುಂಟುಮಾಡುವ ಪ್ರಯೋಗಶಾಲೆಯೆಂದರೆ ತಪ್ಪಾಗಲಾರದು. ಹಾಡಿನ ಲಯಕ್ಕೆ ತಕ್ಕಂತೆ ಬಳುಕುವ ಅವಳ ಮೈಮಾಟದ ಮೋಡಿ ಗಮಾರನನ್ನೂ ಸುಕುಮಾರನನ್ನಾಗಿ ಮಾಡುವಂತ್ತಿತ್ತು.

ನಾಟ್ಯ ನೋಡಲು ಹೋದ ರಸಿಕರೆದೆಗೆ ಕನ್ನಹಾಕುವಂತೆ ಸಾಂದರ್ಭಿಕವಾಗಿ ಹಾಡುಕಟ್ಟಿ ಹಾಡುವ ಅವಳ ಸಾಹಿತ್ಯದ ಹಿತ ನೆರೆದವರನ್ನು ರಸರಂಗಕ್ಕೆಳೆಯುವುದು ಖಚಿತ. ಆದರೆ ಅವಳು ನಾವೆಣಿಸಿದಂತಲ್ಲ ಉಚಿತ. ಹಾಗೊಮ್ಮೆ ರೋಗಪತ್ತೆಗೆಂದು ವೈದ್ಯರ ಜೀಪ್ ಚಾಲಕ ಅದೇ ಗ್ರಾಮದ ಗೋಪಾಲ್‌ದಾಸ್‌ನ ಒಡಗೂಡಿ ಮನೆ ಮನೆ ಭೇಟಿ ಕಾರ್ಯದಲ್ಲಿ ತೊಡಗಿದ್ದಾಗ ಆಕಸ್ಮಿಕವಾಗಿ ಬಂದ ಬೇಲಳ ಮನೆಯ ಚಹಾಕೂಟದ ಕರೆಗೆ ಸಮ್ಮತಿಸಿ ಹೋಗುತ್ತಾರೆ. ನರ್ತಕಿಯರ ಕುಟುಂಬದಲ್ಲಿ ಹುಟ್ಟಿ ತಮ್ಮ ವೃತ್ತಿಗೌರವಕ್ಕೆ ಕುಂದುಬಾರದಂತೆ ಬದುಕುತ್ತಿದ್ದ ಆತ್ಮಗೌರವದ ನರ್ತಕಿಯವಳು. ಅವಳ ತಮ್ಮನ ರಾಯಭಾರದೊಂದಿಗೆ ಬೇಲಳ ಮನೆಗೆ ಹೋದ ವೈದ್ಯನಿಗೆ ಕರ್ನಾಟಕ ಮೂಲದವರು ಹಾಗೂ ಕಥೆಗಾರನೆಂದೇ ಪರಿಚಯವಾಗಿದ್ದು ಜೊತೆಗೆ ಸಾಹಿತ್ಯದ ಬಗೆಗೆ ಅಪಾರ ಆಸಕ್ತಿಯಿದ್ದವಳು ಬೇಲ. ಅಂತೆಯೇ ಗ್ರಾಮೀಣರ ಬದುಕು-ಬವಣೆಯ ಕುರಿತು ಬರೆಯುವ ಒಬ್ಬ ಸೀಮಿತ ಕತೆಗಾರ ನಾನು ಎಂದು ಬೆಸಗರಹಳ್ಳಿ ಆಡಿದ ನುಡಿಗಳು ಅವಳಲ್ಲಿ ಸುಪ್ತವಾಗಿದ್ದ ಗ್ರಾಮ ಪರಿಕಲ್ಪನೆಯನ್ನು ಅಭಿಮಾನಪೂರ್ವಕವಾಗಿ ಹೊರಹಾಕುವಂತೆ ಮಾಡುತ್ತದೆ.

ಫಣೀಶ್ವರನಾಥ ರೇಣು ಎಂಬ ಹಿಂದಿ ಕಾದಂಬರಿಕಾರ ಬರೆದ 'ಮೈಲ್ ಆಂಚಲ್' ಎಂಬ ಜನಪ್ರಿಯ ಕಾದಂಬರಿಯ ಪ್ರಸಂಗವನ್ನ ಹೋಲುವಂತೆಯೇ ಅಲ್ಲಿನ ಮೇರಿಗಂಜ್

ಹಳ್ಳಿಗೆ ಅಂತದೇ ಆಶಯ ಹೊತ್ತು ಬಂದ ವೈದ್ಯನಂತೆ ಭಾಸವಾಗುತ್ತಾನೆ ಬೇಲಳಿಗೆ ಈ ಕಥೆಗಾರ. ಬೇಲಳ ಅಭಿರುಚಿಗಳು ಅವಳನ್ನು ಪರಿಪಕ್ವತೆಯೆಡೆಗೆ ಕೊಂಡೊಯ್ದವು. ಬುದ್ಧಿ-ಭಾವಗಳ ಸಂಯೋಜನೆಯನ್ನರಿತವಳು ಅವಳು. ತಾನು ಕ್ರಮಿಸುತ್ತಿರುವ ಹಾದಿ ದುರ್ಗಮವೆಂಬ ಅರಿವಿದ್ದಾಗಿಯೂ ಅದೇ ಮಾರ್ಗದಲ್ಲಿ ಪಯಣ ಆರಂಭಿಸುವುದು ಕೆಲವೊಮ್ಮೆ ಅನಿವಾರ್ಯ ಹಾಗೂ ಆಯ್ಕೆ. ಹಾಗಾಗಿಯೇ ತಾನು ತಾರುಣ್ಯದ ಗಣಿಯಾಗಿದ್ದು, ನರ್ತಕಿಯೇ ಆಗಿದ್ದರೂ ಲೋಕದ ಗೊಡವೆಗೆ ಕಿವಿಯಾಗಿ ಸಾಮಾಜಿಕ ಸ್ಪಂದನೆಯುಳ್ಳ ಹೆಣ್ಣಾಗಿ ಬೆಳೆದದ್ದು ಸೋಜಿಗ. ಅಲ್ಲದೆ ಸಾಹಿತ್ಯ, ಸಂಗೀತ, ಸಾಮಾಜಿಕ ನೋಟ, ಮಾತು-ಮಂಥನದಲ್ಲಿ ಅವಳ ಆಯ್ಕೆಯ ವಸ್ತುವಾದ ಹೆಣ್ಣು, ಶೀಲ, ಶ್ರೀಮಂತಿಕೆಗಳ ಕುರಿತಾದ ಅವಳ ನಿಲುವಿಗೆ ನಿಲುವುಗನ್ನಡಿಯೇ ನಾಚುವಂತದ್ದು. ಮಿನುಗು ವ್ಯಕ್ತಿತ್ವದ ಬೇಲಳಲ್ಲಿನ ಓದಿನ ವಿಸ್ತಾರ ಹಾಗೂ ಗಡಿ-ಸೀಮೆಗಳ ಎಲ್ಲೆಕಟ್ಟನ್ನು ಮೀರಿದ ಮಾನವೀಯ ಕಕ್ಕುಲತೆ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯನ್ನು ಕತೆಗಾರನಿಗೆ ಪರಿಚಯಮಾಡಿಸುತ್ತದೆ. ಅಲ್ಲದೆ ವೈದ್ಯರ ತಂಡಕ್ಕೆ ಅಂದು ಊಟದ ವ್ಯವಸ್ಥೆಮಾಡಿ ರೋಗನಿವಾರಣೆಗೆ ಬಂದವರಿಗೆ ಅವಳು ನೆರವಾದ ರೀತಿ ಅಭಿನಂದನಾರ್ಹವಾದದ್ದು. ಮಿಗಿಲಾಗಿ ಅವಳೆಂಥಹಾ ದೇಶಭಕ್ತೆ ಎಂಬುದನ್ನು ಅವಳ ಮನೆಯ ಗೋಡೆಗಳು ಸಾರುತ್ತಿದ್ದವು. 'ಜೆಪಿ' ಯವರ ಹೋರಾಟದ ಮಾರ್ಗವನ್ನು ಬಹುವಾಗಿ ಬೆಂಬಲಿಸಿದ್ದ ಬೇಲ 'ಭಾರತದ ಭವಿಷ್ಯ ಬಂದೂಕಿನ ನಳಿಕೆಯಲ್ಲಿಲ್ಲ ಶಾಂತಿ-ಸಹಬಾಳ್ವೆ ಹಾಗೂ ಸಾಮರಸ್ಯದಲ್ಲಿದೆ' ಎಂದು ಸೂಚ್ಯವಾಗಿ ನುಡಿಯುತ್ತಾಳೆ. ವರ್ತಮಾನದ ಜಾಗತಿಕ ಬಿಕ್ಕಟ್ಟುಗಳಲ್ಲಿ ಒಂದಾದ ಯುದ್ಧ ಹಾಗೂ ಅಶಾಂತಿಯ ವಿರುದ್ಧ ಜಗತ್ತೇ ಸಂಘಟಿತ ಹೋರಾಟಕ್ಕೆ ಹಣಿಯಾಗಿರುವ ಈ ದಿನಮಾನಗಳಲ್ಲಿ ಅವಳ ಸೂಕ್ಷ್ಮತೆಯ ಮಾತು ಹಾಗೂ ಇಂಗಿತ ಜ್ಞಾನ ಭವಿಷ್ಯದ ಬಗೆಗೆ ಪ್ರತಿಯೊಬ್ಬ ನಾಗರೀಕನೂ ತಳೆಯಬಹುದಾದ ನಿಲುವನ್ನು ಪ್ರಚುರಪಡಿಸುತ್ತದೆ. ಅಲ್ಲದೆ ತಾನು ಕೇವಲ ನರ್ತಕಿಯಾಗಿರದೆ ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತಿರುವ ಪ್ರಜೆಯಾಗಿ ಕಾಣುತ್ತಾಳೆ. ತಾನೊಬ್ಬ ಉತ್ತಮ ಓದುಗಳು ಎಂಬುದು ತನ್ನ ಮನೆಯ ಕಪಾಟಿನಲ್ಲಡಗಿದ್ದ ಪುಸ್ತಕಭಂಡಾರದಿಂದ ಅರ್ಥವಾಗುತ್ತಿತ್ತು.

ಹೇಳಿ ಕೇಳಿ ಬೇಲ ಒಳ್ಳೆಯ ಹಾಡುಗಾರ್ತಿ. ಈ ದೇಶದ ನೆಲ-ಜಲದ ಬಗೆಗೆ ಅವಳಿಗಿದ್ದ ಆರ್ದ್ರಭಾವ, ತಳಮಳಗಳಿಲ್ಲದ ಅವಳ ಕಂಠಸಿರಿ ತನ್ನ ದೇಹಸಿರಿಯಷ್ಟೇ ಶ್ರೀಮಂತವಾಗಿದ್ದು ನೋಡುಗರ ಮೈ ಮನಸ್ಸುಗಳು ಅವಳತ್ತ ಜಾರತೊಡಗಿತ್ತು. ಈ ಸಂದರ್ಭಕ್ಕೆ ಕತೆಗಾರನ ಮನ ಮಾಗಿದ ಹಣ್ಣಾಗಿ, ಬೇಲ ತನ್ನಂತರಂಗದ ಕಣ್ಣಾಗಿ ಕಂಡಳು. ಮುಂದುವರೆದು ಅವಳು ಸೌಂದರ್ಯದ ಬಗೆಗೆ ಗಂಡಿನ ಭಾವನೆಗಳನ್ನು ಅನಾವರಣಗೊಳಿಸುತ್ತಾ ಹೀಗಂದಳು 'ಹೆಣ್ಣಿನ ಅಂತರಂಗದ ಆಸೆಗಳನ್ನು ಅರ್ಥಮಾಡಿಕೊಳ್ಳುವವರು ಅಪರೂಪ' ಎನ್ನುತ್ತಾ ಕೇವಲ ಬಾಹ್ಯನೋಟಕ್ಕೆ, ಮೈಮಾಟಕ್ಕೆ ಮಾತ್ರವೇ ಬೆಲೆಕೊಡುವ ಕಾಲದಲ್ಲಿ ನಾವಿರುವುದನ್ನು ನೆನಪಿಸಿದಂತಿತ್ತು. ಬೇಲಳ ಒಂದೊಂದು ಮಾರ್ಮಿಕ ನುಡಿಗಳು ಕತೆಗಾರನಲ್ಲಿ ಅವಳ ರೂಪವನ್ನು ಮತ್ತಷ್ಟು ಗಾಢವಾಗಿ ಅಚ್ಚೊತ್ತತೊಡಗಿತ್ತು ಹಾಗೂ ಅವಳ ನರ್ತನವನ್ನು ಎದೆಗಿಳಿಸಿಕೊಳ್ಳುವ ತೀವ್ರಬಯಕೆಯನ್ನು ಅವಳೊಟ್ಟಿಗೆ ವ್ಯಕ್ತಪಡಿಸಿತ್ತು. ಆದರೂ ಬೇಲ ತನ್ನ ಸ್ಥಿತಿಯನ್ನು

ಸಮಚಿತ್ತದಿಂದ ಕಥೆಗಾರನೊಂದಿಗೆ ಹಂಚಿಕೊಂಡ ರೀತಿ ಈರ್ವರ ಮನೋರಥವನ್ನು ಪ್ರಚುರಪಡಿಸುತ್ತಿತ್ತು. ಕಾರಣ ಋತುಚಕ್ರ ಅವಳಿಗೆ ಇನ್ನೂ ಮೂರು ದಿನ ಕುಣಿಯದಂತೆ ಕಾಲಿಗೆ ಕುಣಿಕೆ ಹಾಕಿತ್ತು. ಜೊತೆಗೆ ತಪ್ಪಿಯೂ ಇವರಿಗೆ ಆಶಾಭಂಗ ಮಾಡಬಾರದೆಂಬ ತೀರ್ಮಾನಕ್ಕೆ ಅವಳು ಬಂದಂತಿತ್ತು. ಆದರೆ ಕವಿ ಮನಸ್ಸು ಮಾತ್ರ ಅಲ್ಲಿಂದ ಹೊರಟ ನಂತರವೂ ಅವಳ ನೆನಪುಗಳನ್ನೇ ವಾದ್ಯಮಾಡಿಕೊಂಡು ತಂತಿ ಮೀಟುತ್ತಿತ್ತು. ಅವಳ ಕಂಠ, ಸೊಂಟ ಎಲ್ಲಕ್ಕೂ ವೈದ್ಯ ಕಥೆಗಾರನಾದ ಮಹಾನೆಂಟ.

ಐದು ದಿನ ಶಿಬಿರಕ್ಕೆ ಬಿಡುವಿತ್ತು. ಮರುದಿನ ಅವಳ ಕಛೇರಿ ನೋಡಲು ಬಂದವನಿಗೆ ಅವಳ ನಾಟ್ಯದ ರಸದೌತಣ ಕಾದಿತ್ತು. ಗೆಜ್ಜೆ ಕಟ್ಟಿ ಹೆಜ್ಜೆಹಾಕಿ ಮೈಮರೆತು ಕುಣಿದು ಕವಿಯ ಕಣ್ಮನ ತಣಿಸಿದಳು. ಆ ದಿನ ರಾತ್ರಿ ಅಲ್ಲೇ ತಂಗಲು ವ್ಯವಸ್ಥೆಯಾದಾಗ ವೈದ್ಯ ವಿನಯದಿಂದಲೇ ಸ್ವೀಕರಿಸಲು ಆ ರಾತ್ರಿಯಲ್ಲಿ ದೀಪ ಆರಿತು. ಕಾದ ಕಾವಲಿಯಂತಾಗಿದ್ದ ಅವಳ ಮೈಕಾಂತಿಯನ್ನು ಶಾಂತಗೊಳಿಸಲು ತಾನೂ ಸಿದ್ದನಾಗಿ ಅವಳ ಒಲುಮೆಯ ಕುಲುಮೆಗೆ ತಾನೇ ಚಿಲುಮೆಯಾಗಿ ಚಿಮ್ಮಿದನು. ದೂರದೂರಿಂದ ಹೋಗಿದ್ದ ಕತೆಗಾರ ಆ ಸನ್ನಿವೇಶದಲ್ಲಿ ಬೇಲ ಕೇಳಿದ ಆತನ ಮದುವೆಯ ಪ್ರಶ್ನೆಗೆ ಇಲ್ಲವೆಂದು ಸುಳ್ಳಾಡಿ ತನ್ನ ಬಯಕೆಯನ್ನು ಗೆದ್ದಿದ್ದ. ಆದರೆ ಅವಳ ಸೆರಗಿನೊಳಗಿನ ಅರಗಿನರಮನೆಯ ಪ್ರಾಮಾಣಿಕ ಸೇವೆಗೆ ತಾನು ಸೋತಿದ್ದ, ಕೊನೆಗೂ ತನ್ನಾತ್ಮಸಾಕ್ಷಿ ತಾನು ವಿವಾಹಿತನೆಂಬ ನಿಜವನ್ನೇ ನುಡಿಯಿತು. ಆಗಲೂ ಬೇಲ ಬೇಸರಗೊಳ್ಳಲಿಲ್ಲ. ಕಾರಣ ಅವನಲ್ಲಿನ ಪಶ್ಚಾತ್ತಾಪ ಗುಣ ಅವನ ಬಗೆಗೆ ಅವಳಲ್ಲಿ ಪ್ರೀತಿಯನ್ನೇ ಒಸರಿ ಪಸರಿಸಿತ್ತು. ವೈವಾಹಿಕ ಸಂಬಂಧಗಳು ಜಟಿಲವಾಗುತ್ತಿರುವ ಈ ಸಂದರ್ಭದಲ್ಲಿ ಅಕ್ರಮ ಸಂಬಂಧಗಳು ಎಲ್ಲೆ ಮೀರಿದ್ದರೂ ಕೂಡಾ ಹೆಣ್ಣಿನ ಮೋಹ ಪಾಶಕ್ಕೆ ಸಿಲುಕಿದ ಗಂಡು ತನ್ನ ಮನೋವಾಂಛೆಯನ್ನು ತಣಿಸಿಕೊಳ್ಳಲು ಮುಖವಾಡ ತೊಡುವುದು ಇಂದಿನ ಸಹಜತೆಯಲ್ಲೊಂದು. ಆದರೆ ಬದುಕನ್ನೂ, ಭರವಸೆಗಳನ್ನೂ ತಲಸ್ಪರ್ಶಿಯಾಗಿ ಅನುಭವಿಸಿದ ಬೇಲಳಿಗೆ ಗಂಡಿನಾಳದಲ್ಲಿನ ಆಲೋಚನೆಗಳನ್ನು ಓದುವುದು ಕಠಿಣವಾಗಿರಲಿಲ್ಲ. ಹಾಗಾಗಿಯೇ ಅವಳ ಪರೀಕ್ಷೆಯಲ್ಲಿ ಕತೆಗಾರನಿಗೆ ಒಂದಷ್ಟು ವಿನಾಯ್ತಿ ಮತ್ತು ರಿಯಾಯ್ತಿಗಳು ಲಭ್ಯವಾದವು ಕಾರಣ ತಾನೂ ಒಬ್ಬ ಸಮಾಜ ಚಿಕಿತ್ಸಕನೆಂಬುದು ಅವಳ ನಂಬಿಕೆ.

ಅಲ್ಲದೆ ಬೇಲ ಕೂಡಾ ತನ್ನ ದಾಂಪತ್ಯ ನೇಪಥ್ಯವಾದ ಬಗ್ಗೆ ಕಥೆಗಾರನಲ್ಲಿ ನಿವೇದಿಸಿಕೊಂಡು ಕಣ್ಣೀರಾಗುತ್ತಾಳೆ. ವ್ಯಭಿಚಾರದಲ್ಲೂ ಪೂಜ್ಯಭಾವನೆ ಅವಳದ್ದು. ಆ ರಾತ್ರಿಯ ಅವರ ಸೋಲು-ಗೆಲುವಿನಾಟದಲ್ಲಿ ಮರುಹುಟ್ಟನ್ನು ಪಡೆದ ಬೇಲ ಬೆಳಗ್ಗೆ ಎದ್ದು ಅವನಿಗೆ ಕಾಫಿ ತಿಂಡಿಯ ಉಪಚಾರಗೈದು ತನ್ನ ಮಡದಿ ಮಕ್ಕಳ ಬಗೆಗೆ ವಿಚಾರಿಸಿ ಹೆಣ್ತನದ ಘನತೆಗೆ ಮತ್ತೊಂದು ಗರಿಯಾದಳು. ಆತನೆದೆಯಲ್ಲಿ ಸದ್ದಿಲ್ಲದೆ ಹರಿವ ನೀರ ಝರಿಯಾದಳು. ಅನಂತರ ಆತನಿಗಾಗಿ ಕಾಯುವಳು ನಿರಂತರ, ಆತನೂ ವಚನವಿತ್ತಂತೆ ಬರುವಂತಾದನು ಅವಳಿಗೆ ಇನ್ನೂ ಹತ್ತಿರ. ಹೀಗೆ ಈರ್ವರ ನಡುವೆ ನವಿರಾದ ಪ್ರೇಮ-ಕಾಮಭಾವ ಗರಿಗೆದರಿತು. ಇತ್ತ ತನ್ನ ವೈದ್ಯ ಕರ್ತವ್ಯದ ಜೊತೆಗೆ ಕತೆಗಾರನಿಗೆ ಉಂಟಾದ ಸಣ್ಣ ಅಪಘಾತದಿಂದ ದಿಗ್ಭ್ರಾಂತಿಗೊಂಡ ಬೇಲ ಆ ಸನ್ನಿವೇಶದಲ್ಲಿ ಪಟ್ಟ ಆತಂಕ ಕಳವಳ ಕವಿ ಮನಸ್ಸಿಗೆ ಅವಳ ಬಗೆಗಿನ ಪ್ರೀತ್ಯಾದರಗಳನ್ನು ದುಪ್ಪಟ್ಟುಗೊಳಿಸುತ್ತದೆ. 'ಎಷ್ಟೇ

ಸಮಯಯವಾದರೂ ನಾನು ರಾತ್ರಿಗೆ ಮರಳಿ ಬರುತ್ತೇನೆಂದು ಹೇಳಿ ಹೋದ ಮಾತಿನಂತೆ' ಅವಳಿಗಾಗಿ ಒಂದು ಚೆಂದದ ಸೀರೆಯನ್ನು ಉಡುಗೊರೆಯಾಗಿ ತಂದಿರುತ್ತಾನೆ. ಈಕೆಯ ಬಗೆಗಿನ ಆತನ ಕಾಳಜಿ ದಾಂಪತ್ಯದ ಸಂಕೋಲೆಯಿಂದ ಅವಳನ್ನು ಬಿಗಿಯಾಗಿ ಬಂಧಿಸಿಬಿಡುತ್ತದೆ. ದೇವರಿಗೆ ದೀಪವಚ್ಚಿ ಅವನ ಶ್ರೇಯಸ್ಸನ್ನು ಬೇಡುವಾಗ ದಾಂಪತ್ಯದ ಸಹಜ ಪ್ರತೀಕವಾಗುತ್ತಾಳೆ ಬೇಲ. ಆತನ ಹಸಿವಿಗೆ ರುಚಿಕರ ಅಡುಗೆಯಾಗುತ್ತಾಳೆ. ಆದರೆ ಆತ ತಂದ ಉಡುಗೊರೆಯ ಬಗ್ಗೆ ಅವಳು ಅಷ್ಟಾಗಿ ಪುಳಕಿತಳಾಗದೆ, ನಿಮ್ಮ ಪ್ರೀತಿ ಒಂದೇ ಸಾಕೆಂದು ಅದೇ ಸೀರೆ ಧರಿಸಿ ಆ ರಾತ್ರಿಗೆ ಖಾತ್ರಿಯಾಗುತ್ತಾಳೆ.

ಇಡೀ ಕತ್ತಲು ಕಳೆಯುವವರೆಗೂ ಕಣ್ಣ ರೆಪ್ಪೆ ಒಂದಾಗದಂತೆ ಕಾಲ ಕಳೆಯುತ್ತಾರೆ. ಅಲ್ಲದೆ ಇನ್ನು ಒಂದು ತಿಂಗಳು ಕಾಲ ಮಾತ್ರ ವೈದ್ಯ ತಾನಿಲ್ಲಿರುವ ವಿಚಾರ ಹೇಳಲಾಗಿ ಆನಂತರ 'ಜೆಪಿ' ಯವರ ಸಂಪೂರ್ಣ ಕ್ರಾಂತಿಯಲ್ಲಿ ತೊಡಗಿಸಿಕೊಳ್ಳುವೆನು ಎಂದಾಗ ನೀವು ಕ್ರಾಂತಿ ಮಾಡುವುದಾದರೆ ನನ್ನ ಜನಾಂಗದ ಹೆಣ್ಣುಗಳ ಸಾಮಾಜಿಕ ಗೌರವಕ್ಕಾಗಿ ಈ ಮೂಢ ಸಂಪ್ರದಾಯದ ವಿಮೋಚನೆಗಾಗಿ ಹೋರಾಡಿ ಎಂದು ಹೇಳುತ್ತಾ ತನ್ನ ಸಮುದಾಯ ಅನುಭವಿಸುತ್ತಿರುವ ಸಾಮಾಜಿಕ ಹಿಂಬೀಳುವಿಕೆ ಮತ್ತು ಶೋಷಣೆಯನ್ನು ಪ್ರತಿಭಟನಾ ರೂಪದಲ್ಲಿ ವ್ಯಕ್ತಪಡಿಸುತ್ತಾಳೆ ಹಾಗೂ ಸಮಾನತೆಯ ಕನಸನ್ನು ಕಾಣುತ್ತಾಳೆ. ಜೊತೆಗೆ ಕತೆಗಾರನಾದ ಸಂಗಾತಿಗೆ 'ಸಿಡುಬನ್ನು ನಿರ್ಮೂಲನೆ ಮಾಡಿದ್ದಷ್ಟೇ ಸುಲಭವಲ್ಲ ವೇಶ್ಯಾವೃತ್ತಿಯನ್ನು ನಿರ್ಮೂಲನೆ ಮಾಡುವುದು ಎನ್ನುತ್ತಾಳೆ'. ಅಂದರೆ ಈ ಜಡಗೊಂಡ, ಅಸಮ ಸಮಾಜದ ಕಟ್ಟುಪಾಡುಗಳು ಲಿಂಗಾಧಾರಿತವಾಗಿ ಭಿನ್ನವಾಗಿದ್ದಾಗಿಯೂ ಹೆಣ್ಣಿನ ವಿಚಾರದಲ್ಲಿ ಕಠಿಣವೂ ಆಗಿರುವುದು ಹೊಸದೇನಲ್ಲ. ಆ ಕಾರಣಕ್ಕಾಗಿಯೇ ತನ್ನದೇ ಸಮುದಾಯದ, ವೃತ್ತಿಯ ಹೆಣ್ಣುಗಳ ತಲತಲಾಂತರದ ಸ್ಥಿತಿಗತಿಯನ್ನು ಕಂಡು ಮರುಕಗೊಂಡ ಬೇಲ ಅವರ ಸಾಮಾಜಿಕ ಸ್ಥಾನ-ಮಾನಗಳ ಸುಧಾರಣೆ ಮತ್ತು ಬದಲಾವಣೆಗಾಗಿ ಮಿಡಿಯುತ್ತಾಳೆ. ಜೊತೆಗೆ ಆಳುವ ವ್ಯವಸ್ಥೆಯ ಅಸಡ್ಡೆ ಹಾಗೂ ಜಾಣಕುರುಡುತನದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಒಬ್ಬ ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ ಇಂತಹ ಅನಿಷ್ಟ ಪದ್ಧತಿಗಳ ವಿರುದ್ಧ ದನಿಯಾಗುವಂತೆ ಕತೆಗಾರನಲ್ಲಿ ನಿವೇದಿಸಿಕೊಳ್ಳುತ್ತಾಳೆ.

ಇಡೀ ರಾತ್ರಿ ತನ್ನ ವೈದ್ಯ ಸಖನ ಸುಖದಿಂದ ಅವನ ತೆಕ್ಕೆಯಲ್ಲಿ ರಮಿಸಿ, ವಿರಮಿಸಿ ರಸಕ್ಷಣಗಳಿಗೆ ಸಾಕ್ಷಿಯಾಗುತ್ತಾಳೆ. ಬೆಳಗಾನೆ ತಾನು ಹೊರಡಲು ಸಿದ್ಧವಾದಾಗ ಹೂ ಕಳಚಿದ ಗಿಡದಂತೆ ಬಾಡಿ ಹೋಗುತ್ತಾಳೆ ಬೇಲ. ಆನಂತರ ಒಂದು ವಾರ ಇವರ ಭೇಟಿಗೆ ವಾಯಿದಾ ಬೀಳುತ್ತದೆ. 15 ದಿನವಾಯಿತು ಆತನಿಗೆ ಕರ್ತವ್ಯ ಪಾಲನೆ ಅಡ್ಡಿಯಾಯಿತು. ಮತ್ತೆ ಅವಳನ್ನು ಭೇಟಿಯಾಗಲು ಸಾಧ್ಯವಾಗದೆ ವೈದ್ಯ ವಿರಹದಲ್ಲಿ ಬೆಂದನು. ತಾನು ಮರಳಿ ಬಂದಾಗ ಬೇಲ ಮನೆಯಲ್ಲಿಲ್ಲ ಕಾರಣ ಅವಳದೂ ಕರ್ತವ್ಯ ಪಾಲನೆಯೇ. ಎಷ್ಟೇ ದೊಡ್ಡವರ ಸಖ್ಯವಿದ್ದರೂ, ಸೌಲಭ್ಯಗಳಿದ್ದರೂ ಸಂಪ್ರದಾಯದಂತೆ ಜಮೀನ್ದಾರನ ಮಗನ ಮದುವೆಯಲ್ಲಿ ನರ್ತನಮಾಡಲು ಹೋಗಿರುತ್ತಾಳೆ ಬೇಲ. ವಿದ್ಯೆ, ವಿವೇಕವಂತಳಾದರೂ ಸಂಪ್ರದಾಯಗಳ ಸುಳಿಯಿಂದ ಹೊರಬರಲಾಗದೆ ಅಂಟಿಕೊಂಡೇ ಬಾಳಬೇಕಾದ ಅನಿವಾರ್ಯತೆಯಿಲ್ಲಿದೆ. ಇದು ಕೇವಲ ಬೇಲ ಒಬ್ಬಳ ಸ್ಥಿತಿಯಲ್ಲ ಇಡೀ ದೇಶದ ಸ್ಥಿತಿ. ಈ

ಶ್ರೇಣೀಕೃತ ಭಾರತದಲ್ಲಿ ಜಾತಿ, ವೃತ್ತಿ, ಆಚರಣೆಗಳ ಆಧಾರವಾಗಿ ಅದೆಷ್ಟೋ ಅನಿಷ್ಟ ಪದ್ಧತಿಗಳು ತಾನು ಸ್ವತಃ ಬಿಡಬೇಕೆಂದರೂ ಸಂದರ್ಭದ ಒತ್ತಾಯಕ್ಕೆ ಸಿಲುಕಿ ಬಿಡಲಾಗದೆ ಹೆಣಗಾಡುತ್ತಿರುವುದನ್ನು ಇಂದಿಗೂ ಕಾಣಬಹುದು. ಉದಾ: ಚಮ್ಮಾರಿಕೆ, ತೋಟಿಚಾಕರಿ, ಮಡಿವಾಳವೃತ್ತಿ, ಭಂಗಿ ಕಾಯಕ, ಜಲಗಾರವೃತ್ತಿ, ಬಸವಿ ಬಿಡುವುದು ಅಥವಾ ದೇವದಾಸಿ ಪದ್ದತಿ ಇತ್ಯಾದಿಗಳನ್ನು ನೋಡುವ ನೋಟಕ್ರಮ ಹಾಗೂ ಅವುಗಳ ಬಗೆಗಿನ ಅಸಡ್ಡೆಯನ್ನು 21ನೇ ಶತಮಾನದಲ್ಲೂ ಹೆಗ್ಗಿಲ್ಲದೆ ಪೋಷಿಸಿಕೊಂಡು ಬರುತ್ತಿರುವುದು ಈ ಸಮಾಜದ ಅಸಹ್ಯ ಮನಸ್ಥಿತಿಯನ್ನು ಸಾರಿಹೇಳುತ್ತಿದೆ. ಜಗತ್ತಿಗೇ ಮಾನವೀಯತೆಯ, ಸರ್ವಜನಪ್ರೀತಿಯ ಪಾಠ ಹೇಳಿದ ಸರ್ವಶ್ರೇಷ್ಠ ಮಾನವ ಬುದ್ದನ ಜನ್ಮಸ್ಥಳವಾದ ಬಿಹಾರದಲ್ಲಿ ಇಂದಿಗೂ ಕೊನೆಯಿಲ್ಲದ ಅರಾಜಕತೆ, ಅಸ್ಥಿರತೆ, ಅಮಾನವೀಯತೆ, ಅಸಹಿಷ್ಣುತೆ ಹಾಸುಹೊಕ್ಕಾಗಿರುವುದು ಈ ನೆಲಕ್ಕಂಟಿದ ಕಳಂಕವೇ ಸರಿ.

ಅಂದು ಬೇಲಳ ಭೇಟಿಗಾಗಿ ಬಂದು ಅವಳಿಗಾಗಿ ಕಾಯುವಿಕೆಯ ಹೊರೆ ತಾಳಲಾರದೆ ಭಾರವಾದ ಮನಸ್ಸಿನಿಂದ ತಾನು ವಾಪಸ್ಸಾಗುತ್ತಾನೆ ಕತೆಗಾರ. ತನ್ನ ಒಪ್ಪಂದದಂತೆ ಸಿಡುಬು ರೋಗ ನಿರ್ಮೂಲನಾ ಶಿಬಿರ ಇನ್ನು ಎರಡು ದಿನಗಳಲ್ಲಿ ಮುಗಿಯಲಿದ್ದು ಅವಳನ್ನು ಕಾಣುವ-ಸೇರುವ ತವಕ ಅಗಾಧವಾಗಿ ವೈದ್ಯನನ್ನು ಆವರಿಸುತ್ತದೆ. ಕೊನೆಯ ದಿನ ಮತ್ತೆ ಬಿಸಾಲ್ ಸೇರಿ ಅವಳನ್ನು ಭೇಟಿಯಾಗುತ್ತಾನೆ. ಮೃದು ಮನಸ್ಸಿನ ಬೇಲ ಅಷ್ಟೇ ಪ್ರೀತಿಯಿಂದ ಅವನನ್ನು ಆದರಿಸುತ್ತಾಳೆ ಹಾಗೂ ಆವರಿಸುತ್ತಾಳೆ. ಇವನಿಗೆ ಉಳಿದಿರುವುದು ಕೇವಲ ಹನ್ನೆರಡು ಗಂಟೆಗಳು ಮಾತ್ರ. ಎಂದಿನಂತೆ ಅವಳು ಸೀರೆ ಉಟ್ಟು ಸಿದ್ದಳಾಗುತ್ತಾಳೆ ಸೆರಗಿನ ಪೂಜೆಗೆ. ಕೊನೆಯ ಬಾರಿ ತನ್ನ ನರ್ತನ ನೋಡಬೇಕೆಂಬ ಕತೆಗಾರನ ಬಯಕೆಗೆ ಬಾಗುತ್ತಾಳೆ. ಅಲ್ಲದೆ ಅವಳ ಮೋಹ ಪಾಶಕ್ಕೆ ಒಳಗಾದವನಿಗೆ ಅವಳಿಂದ ದೂರಾಗುವ ಕ್ಷಣಗಳು ಬಲು ಕಠಿಣವಾಗುತ್ತದೆ. ಅವನಲ್ಲಿ ಎರಡು ಕೋರಿಕೆಗಳನ್ನು ಇಡುತ್ತಾಳೆ ಬೇಲ 1) ನಾವು ಎಷ್ಟು ಬೇಗ ನಮ್ಮ ಸ್ನೇಹ ಬೆಳೆಯಿತೋ ಅಷ್ಟೇ ಬೇಗ ಒಬ್ಬರನ್ನೊಬ್ಬರು ಮರೆಯಬೇಕು 2) ನಮ್ಮ ಸ್ನೇಹವನ್ನು ನಿಮ್ಮ ಹೆಂಡತಿಯೊಡನೆ ಹೇಳಬಾರದು. ಅಂದರೆ ಬದುಕಿನ ಆಕಸ್ಮಿಕಗಳಿಗೆ ಅಂತ್ಯವಾಡುವ ಹಾಗೂ ಸಹಜತೆಯತ್ತ ಸಾಗುವ ಭೂಮಿ ತೂಕದ ಗುಣದವಳು ಬೇಲ.

'ಯಾವುದೇ ಹೆಣ್ಣು ಗಂಡನ ಪ್ರೀತಿಯಲ್ಲಿ ಇನ್ನೊಂದು ಹೆಣ್ಣಿಗೆ ಪಾಲು ಕೊಡುವಷ್ಟು ಉದಾರಿಯಲ್ಲ' ಎಂದು ಹೇಳಿ ಕತೆಗಾರನ ಮಡದಿಯ ಸ್ಥಾನದ ಬಗೆಗೆ ಒಂದು ಹೆಣ್ಣಾಗಿ ಅವಳ ಆಂತರ್ಯವನ್ನು ಬಹಿರಂಗಪಡಿಸುತ್ತಾಳೆ ಹಾಗೂ ಪೆಟ್ಟು ತಿಂದರೂ ಕಲ್ಲು ತಾನು ಶಿಲೆಯಾಗಿ ನೋಟಕ್ಕೆ ಅರ್ಹವಾದಂತೆ ಭಾಸವಾಗುತ್ತಾಳೆ. ಈ ಸಾಲುಗಳಲ್ಲಿ ಬೇಲಳಿಗಿರುವ ಸ್ಥಿತಪ್ರಜ್ಞೆಯಿಲ್ಲಿ ಅನಾವರಣಗೊಳ್ಳುತ್ತದೆ. ತನ್ನ ಮತ್ತು ಆ ವೈದ್ಯ ಅತಿಥಿಯ ಮೈಮನಗಳ ಸಂಬಂಧ ಕ್ಷಣಿಕವೆಂಬುದು ಅರಿತೂ ಅವಳ ಅಂತರಂಗದ ಭಾವನೆಗಳನ್ನು ಅವನೊಟ್ಟಿಗೆ ಹಂಚಿಕೊಳ್ಳುತ್ತಾಳೆ ಮತ್ತು ಅವಕ್ಕೆ ಪರಿಹಾರವನ್ನೂ ಬಯಸುತ್ತಾಳೆ. ಬಹುಶಃ ತನಗಾಗಿ ಅವಳು ಬೇರೇನನ್ನೂ ಬಯಸುವುದೇ ಇಲ್ಲ. ಬದುಕಿನ ಬಗೆಗೆ ಅವಳಲ್ಲಿದ್ದ ಪೂರ್ಣದೃಷ್ಟಿ ಅನುಕರಣೀಯವಾದುದು. ಅದೇ ಕತೆಗಾರನಿಗಿಲ್ಲಿ ಕಗ್ಗಂಟಾಗಿ ಬಿಡಿಸದ ನಂಟಾಗುತ್ತದೆ. ಆದರೂ ವಾಸ್ತವದ ಬಗೆಗೆ ಬೇಲಳಿಗಿದ್ದ ಅನುಭವ ಎಲ್ಲ ಬಂಧನಗಳಿಗೂ ಬಿಡುಗಡೆಯನ್ನು

ಬಯಸುವಂತೆ ಮಾಡುತ್ತದೆ.

ಪ್ರೀತಿ ಮತ್ತು ಕಾಮ ಪರಸ್ಪರ ಸಂಧಿಸಿದಾಗ ಸಂಬಂಧಗಳಲ್ಲಿ ದೃಢತೆ ಹೆಚ್ಚುತ್ತದೆ ಎನ್ನುತ್ತಾಳೆ ಬೇಲ. ಬುದ್ಧ ಹೇಳಿದ 'ಆಸೆಯೇ ದುಃಖಕ್ಕೆ ಮೂಲ' ಎಂಬ ಮಾತನ್ನು ಪ್ರಸ್ತಾಪಿಸುತ್ತಾ ಕಥೆಗಾರನ ಕಣ್ಣಿಗೆ ಮಹಾನ್ ಸಂತಳಂತೆ ಪ್ರೇಮಮಯಿಯಾಗಿ ತ್ಯಾಗಮಯಿಯಾಗಿ ಕಾಣುತ್ತಾಳೆ. ಜೊತೆಗೆ ಅವನ ಮಡದಿಗೊಂದು ಉಡುಗೊರೆಯನ್ನು ಕೊಡುತ್ತಾಳೆ. ಇವೆಲ್ಲವುಗಳಿಂದ ತಾನು ಮೂಕವಿಸ್ಮಿತನಾಗುತ್ತಾನೆ. ಅಂತಿಮ ನರ್ತನಕ್ಕೆ ಅಣಿಯಾಗಿ ತನ್ನ ನರ್ತನದೊಂದಿಗೆ ವೈದ್ಯ ಸಂಗಾತಿಗೆ ಕಣ್ಣೀರಿನ ಬೀಳ್ಕೊಡುಗೆ ನೀಡುತ್ತಾಳೆ. ತನ್ನ ಇನಿಯನ ಅಗಲಿಕೆಯನ್ನು ಭಾರವಾದ ಹೃದಯದಿಂದ ಹೊರ ಹಾಕುವ ಬೇಲ ಮಾನವೀಯತೆಯ ಪ್ರತಿರೂಪದಂತಾಗುತ್ತಾಳೆ. ಹಾಡಿನ ಜೊತೆಗೆ ಕುಣಿಯುತ್ತ ಅವಳು 'ಹೇ ಮನುಜ ಹೊರಗಿನ ಮೋಹದ ಆಸೆಯನ್ನು ಬಿಟ್ಟುಬಿಡು, ನಿನ್ನ ಮನೆಯ ಅಂಗಳದಲ್ಲಿ ನದಿಯೇ ಹರಿಯುತ್ತಿರುವಾಗ ಬಾಯಾರಿಕೆಯಿಂದ ಬಳಲುವುದೇಕೆ?' ಎಂಬರ್ಥದ ಹಾಡನ್ನು ಹಾಡುತ್ತಾ ಪುರುಷಾರ್ಥಗಳಿಗೇ ಹೊಸ ಅರ್ಥವನ್ನು ನೀಡುವ ಪರಿ ಕಥೆಗಾರನಿಗೆ ಒಂದು ಹೆಣ್ಣಿನ ಕುರಿತು ಗಂಡಿನ ಮನೋವಾಂಛಲ್ಯಗಳು ಬಿಡಿಬಿಡಿಯಾಗಿ ಚದುರಿಹೋಗುವಲ್ಲಿನ ಅಪಾಯಗಳು, ಅದರಿಂದ ಉಂಟಾಗುವ ಕಹಿಫಲಗಳ ಕುರಿತು ಚಿಂತಿಸುವಂತೆ ಮಾಡುತ್ತದೆ. ಒಬ್ಬ ವೇಶ್ಯಾಸ್ತ್ರೀಯ ಆಲೋಚನೆಗಳಲ್ಲೂ ಸತ್ಯವಿದೆ, ಜೀವನ ಪ್ರೇಮವಿದೆ, ಬದುಕಿನ ನಿಜರೂಪವಿದೆ ಎಂಬುದು ಮನದಟ್ಟಾಗುತ್ತದೆ. ತಾನು ಮಾಡುವ ವೃತ್ತಿಯ ಬಗೆಗೆ ಅವಳಿಗಿರುವ ಅಪಾರ ಗೌರವ ಹಾಗೂ ಮತ್ತೊಬ್ಬರ ಬದುಕಿನ ಬಗೆಗಿನ ಅತೀವ ಕಾಳಜಿ ಅವಳನ್ನು ಬಹು ಎತ್ತರಕ್ಕೆ ನಿಲ್ಲುವಂತೆ ಮಾಡಿ ಅವಳ ನರ್ತನ ಅವನೆದೆಯಲ್ಲಿ ತರಂಗವೆಬ್ಬಿಸುತ್ತದೆ.

ಇವರೀರ್ವರ ಸಂಬಂಧದ ಬಂಧಮುಕ್ತಿಯ ಪ್ರತೀಕವಾಗಿ ಹಾಡನ್ನು ಹಾಡಿ ಬಂದುದನ್ನು ಬಂದಂತೆ ಸ್ವೀಕರಿಸುವ ಮನೋಗುಣದ ಇವಳು ನಿಜ ಬದುಕಿನ ವಾಸ್ತವದ ಪ್ರತಿರೂಪವಾಗುತ್ತಾಳೆ. ದೈವ ಸಮಾನವಾದ ನೃತ್ಯದಲ್ಲಿ ತನ್ನ ಭಾವನೆಗಳನ್ನು ಮಿಳಿತಗೊಳಿಸಿ ಅವನೆದುರು ಪ್ರದರ್ಶಿಸಿದಳು. ಕೇವಲ ಐದು ಗಂಟೆಗಳು ಮಾತ್ರ ಅವರಿಗಾಗಿ ಮೀಸಲಾಗಿದ್ದು ಅದಮ್ಯ ಆಲಿಂಗನದಿಂದ ಈರ್ವರೂ ಆತ್ಮಕ್ಕಂಟಿಕೊಂಡರು. ಆದರೂ ಅಸಂಬದ್ಧವಾದ ಸಂಬಂಧಗಳನ್ನು ಸಹ್ಯವಾಗಿ ಕಾಣುವುದು ಬೇಲಳ ಕುಟುಂಬಕ್ಕೆ ಇರುವ ಬೃಹತ್ ಧಾರಣ ಶಕ್ತಿ. ಅದರ ಪ್ರತ್ಯಕ್ಷರೂಪದಂತಿದೆ ವೈದ್ಯನನ್ನು ಅವಳು ಉಪಚರಿಸಿದ ರೀತಿ. ಬೆಳಗರಿಯಿತು, ಸಂಗಾತಿ ಪ್ರಯಾಣಕ್ಕೆ ಸಿದ್ಧವಾದಾಗ ರಾತ್ರಿ ಅವಳು ತೊಟ್ಟಿದ್ದ ಸೀರೆಯ ಸೆರಗು ಮುದುಡಿತ್ತು. ಸೀರೆಯಂತೆ ಅವಳ ಬದುಕೂ ಕೂಡಾ. ನೀವು ಪ್ರೀತಿಯಿಂದ ಕೊಟ್ಟ ಸೀರೆಯ ಸೆರಗು ನಿಮ್ಮಿಂದಲೇ ಮಾಸಿದೆ ಎಂದಳು. ಮನಸ್ಸು ನಲುಗಿ ಹೋಗಿದ್ದರೂ ಮತ್ತೆ ಅದನ್ನೇ ತೊಡುವುದು ಅನಿವಾರ್ಯ ಎಂಬಂತಿತ್ತು ಅವಳ ಭಾವಭಂಗಿ.

ಆದರೆ ಅವಳ ಮಾತಿನ ಮಾರ್ಮಿಕತೆ ಮಾತ್ರ ಮನಸ್ಸಿರುವ ಯಾವ ಜೀವಿಗೂ ಅರಗಿಸಿಕೊಳ್ಳುವುದು ಸುಲಭವಲ್ಲ. ಮಾತು, ನೋಟ ಎಷ್ಟೇ ಇದ್ದರೂ ಹೆಣ್ಣು-ಗಂಡುಗಳ ಸಂಬಂಧ ಗಡುಸಾಗುವುದೇ ಒಪ್ಪಿತ ದೈಹಿಕ ಸಂಪರ್ಕದ ಮಖೇನ. ಆದರೆ ಅದು

ಭಾವನಾತ್ಮಕವಾಗಿರದೆ ಯಾಂತ್ರಿಕವಾದರೆ ಅದಕ್ಕೆ ಪೂಜ್ಯತೆಯಿಲ್ಲ. ಹಾಗಾಗಿಯೇ ಭಾರತೀಯ ಸಂಸ್ಕೃತಿಯಲ್ಲಿ ವಿವಾಹ, ದಾಂಪತ್ಯ, ಸಂತಾನಕ್ಕೆ ಸಪ್ತಪದಿಯೆಂಬ ಸರಪಳಿಯನ್ನು ಅಳವಡಿಸಲಾಗಿದೆ. ಅದ್ಯಾವುದರ ಹಂಗೂ ಇಲ್ಲದೆ ಕೇವಲ ವೃತ್ತಿ-ಪ್ರವೃತ್ತಿಗಳ, ರುಚಿ-ಅಭಿರುಚಿಗಳ ಕಾರಣಕ್ಕೆ ಮನಸ್ಸುಗಳು ಒಂದಾದ ಬಂಧ ಬೇಲ ಮತ್ತು ವೈದ್ಯನ ನಡುವಿನದು ಅದೇ ಶಾಶ್ವತವೆಂಬುದು ಇಲ್ಲಿನ ನಿಸರ್ಗನೀತಿ.

ಚಹಾ ಹೀರಿ ಅವನು ಹೊರಡಲು ಅನುವಾದಾಗ ಅವಳು ತಾಯ್ತನದ ಸಂಕೇತದಂತೆ ಅವನನ್ನು ಬಿಗಿದಪ್ಪಿ ನಿರ್ಮಲ ಪ್ರೀತಿಯನ್ನು ಸಾರಿದಳು. ಅವನ ಪಾದಗಳಿಗೆ ನಮಸ್ಕರಿಸಿ, ದೂರಾಗುತ್ತಿರುವ ಮನಸ್ಸನ್ನು ದೈವತ್ವಕ್ಕೇರಿಸಿದ ಮಹಾಮೂರ್ತಿಯಾದಳು. ಅವ್ಯಕ್ತ ಭಾವಗಳ ಹೊಡೆದಾಟ ಅಂತರ್ಯದಲ್ಲಿ ತುಂಬಿಕೊಂಡು ಬಿಕ್ಕಿದಳು ಬೇಲ. ನಾನಿನ್ನು ಹೊರಡಲೇ ಎಂದು ತನ್ನ ವೈದ್ಯ ಸಂಗಾತಿ ಅಂದಾಗ ನನ್ನಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ ಎಂದಳವಳು. ಬದುಕನ್ನು ಗಾಢವಾಗಿ ಅರಿತಂಥಹ ಹೆಣ್ಣು ಕಹಿಯಿಂದಲೇ ಸಿಹಿಯನ್ನು ಸವಿದವಳು. ಹಸುಳೆತನದಿಂದ ಗುಟುಕು ನೀಡಿ ಸಲುಹಿದವರನ್ನೂ, ಗೂಡನ್ನೂ ತೊರೆದು ಹೋಗುವ ಮರಿಯನ್ನು ಕಂಡು ಮರುಗುವ ಮರಿತಾಯಿಯಂತಾದಳು ಬೇಲ.

ಬೇಲಳ ಕಣ್ಣೀರಿನ ಬೀಳ್ಕೊಡುಗೆಯಿಂದಲೇ ಬೆಂಗಳೂರಿಗೆ ಬಂದು ಅವಳಿತ್ತ ಕಾಣಿಕೆಯ ಪೆಟ್ಟಿಗೆಯನ್ನು ಕತೆಗಾರ ತೆರೆದಾಗ ಅದರಲ್ಲಿ ಇರಿಸಿದ್ದ ಮುತ್ತೈದೆತನದ ಎಲ್ಲ ಸಂಕೇತಗಳನ್ನು ಕಂಡ ಅವನ ಮಡದಿ ಕುಂಕುಮವನ್ನು ಪ್ರೀತಿಯಿಂದ ಹಣೆಗೆ ಹಚ್ಚಿಕೊಂಡ ಸನ್ನಿವೇಶ ತನ್ನ ಪತಿಯನ್ನು ತನಗೇ ಹಿಂದಿರುಗಿಸಿಕೊಟ್ಟ ಬೇಲಳಿಗೆ ಮೌನದಲ್ಲೇ ಶರಣೆಂಬಂತಿತ್ತು. ಇತ್ತ ತನ್ನತನವನ್ನು ಬೆವರು ಪಾಲು ಮಾಡಿ ಇನ್ನೊಂದು ಹೆಣ್ಣಿಗೆ ಅದನ್ನು ಬಳುವಳಿಯಾಗಿ ನೀಡಿದ ಸುಗುಣಶೀಲೆಯಾದಳು ಬೇಲ. ಜೊತೆಗೆ ಕಥೆಗಾರನ ನೆಚ್ಚಿನ ಕಾದಂಬರಿಯನ್ನು ಪೆಟ್ಟಿಗೆಯಲ್ಲಿರಿಸಿದ್ದಳು. ಈ ಹಿಂದೆ ತನ್ನವರ ಸ್ಥಿತಿಯ ಬಗ್ಗೆ ಅವಳು ಹೇಳಿದ ಮಾತು ನೆನಪಾಗಿ ವಿಮೋಚನೆಗಾಗಿ ಯಾಚಿಸುವ ಕೈಗಳಿಗೆ ಕೋಳತೊಡಿಸಿದ ಕ್ರೂರ ಸಮಾಜದ ಬಗೆಗೆ ಇಲ್ಲಿ ಕಥೆಗಾರನೂ ಅಸಹಾಯಕನಾಗುತ್ತಾನೆ. ಇತ್ತ ದೀಪವಾರಿಸಿ ಮಲಗಲು ಯತ್ನಿಸಿದಾಗ ಆತನಿಗೆ ಅವಳ ರೂಪವೇ ಮೈತಾಳಿ ಬಂದಂತಾಗುತ್ತಿತ್ತು.

ಆರ್ದ್ರ ಪ್ರೀತಿ ತುಂಬಿದ ಹೆಣ್ಣು ಬೇಲ. ಒಬ್ಬ ಅಲ್ಪಕಾಲದ ಪರಿಚಿತನಿಗೆ ಅರ್ಪಿಸಿಕೊಂಡು, ತನ್ನನ್ನೇ ದಹಿಸಿಕೊಂಡು ಬಂದವರಿಗೆ ಬೆಳಕು ನೀಡುವುದು, ತಾನಿರುವ ಸ್ಥಿತಿಯಲ್ಲೇ ತನ್ಮಯತೆ, ಪ್ರಾಮಾಣಿಕತೆಯನ್ನು ಮೆರೆದು ಬದುಕಿನ ನಿಜ ಅರ್ಥವನ್ನು ತನ್ನ ನರ್ತನ ಮತ್ತು ಗಾಯನದ ಮೂಲಕ ಪ್ರಚುರಪಡಿಸುತ್ತಾ ಬಿಡುಗಡೆಗಾಗಿ ಹಂಬಲಿಸುವುದರ ಜೊತೆಗೆ ವ್ಯವಸ್ಥೆಯ ಬದಲಾವಣೆಗೆ ಕನಸು ಕಾಣುವುದು ಅವಳ ನಿತ್ಯಕಾಯಕ. ಇವೆಲ್ಲ ಕಥೆಗಾರ ಕಂಡುಂಡ ನಿಜ ನಂಜಂತೆ ತನ್ನೆದೆಯಲ್ಲಾದ ಭಾವನೆಗಳ ಘರ್ಷಣೆಯ ಗಾಯಗಳಿಗೆ ಸಾಂತ್ವನದ, ಪಶ್ಚಾತ್ತಾಪದ ಮುಲಾಮನ್ನು ಅವಳ ಸಖ್ಯದಿಂದ ಪಡೆಯುತ್ತಾನೆ. ಕೊನೆಗೆ ತನ್ನತನವನ್ನರಿಯಲು ಕಥೆಗಾರನಿಗೆ ಬೇಲ ನೆರವಾದಳು ಹಾಗೂ ಗುರುವಾದಳು.

**ಪರಾಮರ್ಶನ ಗ್ರಂಥಗಳು:**


1. ಬೆಸಗರಹಳ್ಳಿ ರಾಮಣ್ಣ. (2015). ಬೆಸಗರಹಳ್ಳಿ ರಾಮಣ್ಣ ಅವರ ಸಮಗ್ರ ಕಥೆಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ರವಿಕಾಂತೇಗೌಡ ಬಿ. ಆರ್. (2023). ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕಥೆಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಅಮೂರ ಜಿ. ಎಸ್. (1981). ಸಮಕಾಲೀನ ಕಥೆ ಕಾದಂಬರಿ: ಹೊಸ ಪ್ರಯೋಗಗಳು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
4. ಗಿರಡ್ಡಿ ಗೋವಿಂದರಾಜ. (1965). ಸಣ್ಣಕಥೆಯ ಹೊಸ ಒಲವುಗಳು. ಸಂಕ್ರಮಣ ಪ್ರಕಾಶನ. ಧಾರವಾಡ.
5. ನಾಯಕ ಜಿ. ಹೆಚ್. (1982). ಕನ್ನಡ ಸಣ್ಣ ಕಥೆಗಳು. ನ್ಯಾಷನಲ್ ಬುಕ್ ಟ್ರಸ್ಟ್. ನವದೆಹಲಿ.
6. ರಾಜೇಂದ್ರ ಚೆನ್ನಿ. (1987). ಅಧ್ಯಯನ. ಪರಿಸರ ಸಾಹಿತ್ಯ ಪ್ರಕಾಶನ. ಶಿವಮೊಗ್ಗ.
7. ಕೋದಂಡರಾಮ ಎನ್. ಕೆ. (1996). ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ. ಗಾಯತ್ರಿ ಸ್ಮಾರಕ ಗ್ರಂಥಮಾಲೆ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.